# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 311 |
| ಮಾನ್ಯ ಸದಸ್ಯರ ಹೆಸರು | ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 19.07.2024 |
| ಉತ್ತರಿಸುವ ಸಚಿವರು | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಂಬಿಗರ ಚೌಡಯ್ಯ ನಿಗಮದಲ್ಲಿ ಅರಿವು ಶೈಕ್ಷಣಿಕ ಸಾಲಕ್ಕೆ ಬೆಸ್ತ, ಕೋಲಿ ಕಬ್ಬಲಿಗ, ಅಂಬಿಗ ಈ ರೀತಿ ಬೆಸ್ತ ಸಮುದಾಯದ ಒಟ್ಟು ಎಷ್ಟು ವಿದ್ಯಾರ್ಥಿ/ವಿದ್ಯಾರ್ಥಿಯರು ಅರ್ಜಿ ಸಲ್ಲಿಸಿದ್ದಾರೆ; (ಕಳೆದ 3 ವರ್ಷದ ಜಿಲ್ಲಾವಾರು ಮಾಹಿತಿ ಒದಗಿಸುವುದು) | ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೆ ಸಂಬಂಧಿಸಿದಂತೆ, ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಅರ್ಜಿ ಸಲ್ಲಿಸಿದ ವಿವರಗಳನ್ನು **ಅನುಬಂಧ**ದಲ್ಲಿ ಲಗತ್ತಿಸಿದೆ. |
| ಆ) | ಈ ಶೈಕ್ಷಣಿಕ ಸಾಲಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವುದಕ್ಕೆ ಇರುವ ಮಾನದಂಡಗಳೇನು ; ಎಷ್ಟು ವಿದ್ಯಾರ್ಥಿಗಳಿಗೆ ಸಾಲ ಮಂಜೂರು ಮಾಡಲಾಗಿದೆ ; ಎಷ್ಟು ವಿದ್ಯಾರ್ಥಿಗಳಿಗೆ ಸಾಲ ಮಂಜೂರು ಮಾಡಿರುವುದಿಲ್ಲ ; ಈ ಯೋಜನೆಗೆ ಮೀಸಲಿಟ್ಟ ಹಣವೆಷ್ಟು ; ಈ ಹಣ ಸಂಪೂರ್ಣವಾಗಿ ಬಳಕೆಯಾಗಿದೆಯೇ ; (ವಿವರವಾದ ಮಾಹಿತಿ ಒದಗಿಸುವುದು) | ಮಾನದಂಡಗಳು<br>• ಸರ್ಕಾರದ ಆದೇಶ ಸಂಖ್ಯೆ ಸಕಇ 225 ಬಿಸಿಎ 2000 ದಿನಾಂಕ 30.03.2002ರಲ್ಲಿ ಗುರುತಿಸಿದ ಪ್ರವರ್ಗ-1ರಲ್ಲಿ ಕ್ರಮ ಸಂಖ್ಯೆ 6(ಎ) ಯಿಂದ 6(ಎಕೆ) ವರೆಗೆ ಬರುವ ಬೆಸ್ತ, ಕೋಲಿ, ಕಬ್ಬಲಿಗ ಮೊಗವೀರ ಗಂಗಾಮತ ಮತ್ತು ಇದರ ಉಪಜಾತಿಗಳಿಗೆ ಸೇರಿದವರಾಗಿರಬೇಕು.<br>• ವಿದ್ಯಾರ್ಥಿಯು ಸರ್ಕಾರಿ ಕಾಲೇಜು/ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಖಾಸಗಿ ಕಾಲೇಜುಗಳಲ್ಲಿ ವೃತ್ತ ಪರ/ತಾಂತ್ರಿಕ/ಉನ್ನತ ವ್ಯಾಸಂಗದ ಕೋರ್ಸ್‌ಗಳಲ್ಲಿ ಸಿ.ಇ.ಟಿ/ನೀಟ್ ಮೂಲಕ ಪ್ರವೇಶ ಪಡೆದು ವ್ಯಾಸಂಗ ಮಾಡುತ್ತಿರಬೇಕು.<br>• ಅರ್ಜಿದಾರರ ವಯಸ್ಸು 35 ವರ್ಷ ಮೀರಿರಬಾರದು.<br>• ವಿದ್ಯಾರ್ಥಿಯ ಮತ್ತು ಅವರ ಕುಟುಂಬದ ವಾರ್ಷಿಕ ವರಮಾನವು ಎಲ್ಲಾ ಮೂಲಗಳಿಂದ ರೂ.3.50 ಲಕ್ಷಗಳನ್ನು ಮೀರಿರಬಾರದು.<br>• ವಿದ್ಯಾರ್ಥಿಯು ಶೈಕ್ಷಣಿಕ ಉದ್ದೇಶಕ್ಕೆ ಇತರೆ ಯಾವುದೇ ಬ್ಯಾಂಕ್/ಆರ್ಥಿಕ ಸಂಸ್ಥೆಗಳಿಂದ ಸಾಲ ಪಡೆದಿರಬಾರದು.<br>ಕಳೆದ ಮೂರು ವರ್ಷಗಳಲ್ಲಿ ಈ ಕೆಳಕಂಡಂತೆ ಸಾಲ ಮಂಜೂರು ಮಾಡಲಾಗಿರುತ್ತದೆ.<br>**(ರೂ. ಲಕ್ಷಗಳಲ್ಲಿ)**<br>(table below)<br>2023-24ನೇ ಸಾಲಿಗೆ ಸಂಬಂಧಿಸಿದಂತೆ ಈಗಾಗಲೇ 19 ವಿದ್ಯಾರ್ಥಿಗಳಿಗೆ ರೂ.18.21 ಲಕ್ಷಗಳು ಡಿ.ಬಿ.ಟಿ ಮೂಲಕ ವಿದ್ಯಾರ್ಥಿಗಳ ಖಾತೆಗೆ ಪಾವತಿಸಲಾಗಿದೆ. ಇತ್ತೀಚಿನ ಸರ್ಕಾರದ ಆದೇಶದಂತೆ ಯೋಜನೆಗಳನ್ನು K2 ಮೂಲಕ ಅನುಷ್ಠಾನಗೊಳಿಸಬೇಕಾಗಿರುವುದರಿಂದ K2 ಮೂಲಕ ಪಾವತಿಸುವ ಕ್ರಮವಹಿಸಲಾಗಿದೆ. |

| ಕ್ರ. ಸಂ. | ವರ್ಷ | ಸ್ವೀಕರಿಸಿದ ಅರ್ಜಿಗಳ ಸಂಖ್ಯೆ | ಸಾಲ ಮಂಜೂರು ಮಾಡಿದ ವಿವರ | ಮಂಜೂರು ಮಾಡಿದ ಮೊತ್ತ |
|---|---|---|---|---|
| 1 | 2021-22 | - | - | - |
| 2 | 2022-23 | 154 | 93 | 80.33 |
| 3 | 2023-24 | 104 | 75 | 69.74 |

2022-23ನೇ ಸಾಲಿನಲ್ಲಿ ಸ್ವೀಕರಿಸಿದ 154 ಅರ್ಜಿಗಳ ಪೈಕಿ ಬಾಕಿ ಉಳಿದ 61 ವಿದ್ಯಾರ್ಥಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆಯಾಗದ ಕಾರಣ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ.

2023-24ನೇ ಸಾಲಿನಲ್ಲಿ ಸ್ವೀಕರಿಸಿದ 104 ಅರ್ಜಿಗಳ ಪೈಕಿ ಬಾಕಿ ಉಳಿದ 29 ವಿದ್ಯಾರ್ಥಿಗಳು ಆಯ್ಕೆ ಸಮಿತಿ ಮೂಲಕ ಆಯ್ಕೆಯಾಗದ ಕಾರಣ ಸೌಲಭ್ಯ ಒದಗಿಸಲು ಸಾಧ್ಯವಾಗಿರುವುದಿಲ್ಲ.

ಸದರಿ ಯೋಜನೆಗೆ ಕಳೆದ 03 ವರ್ಷಗಳಲ್ಲಿ ನಿಗದಿಪಡಿಸಿದ ಗುರಿ ಈ ಕೆಳಗಿನಂತಿದೆ.

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಗುರಿ | ಆರ್ಥಿಕ |
|---|---|---|---|
| 1 | 2021-22 | - | - |
| 2 | 2022-23 | 167 | 141.50 |
| 3 | 2023-24 | 100 | 100.00 |

2022-23ನೇ ಸಾಲಿನಲ್ಲಿ ರೂ.141.50 ಲಕ್ಷಗಳನ್ನು ಮೀಸಲಿಟ್ಟಿದ್ದು, ಈ ಪೈಕಿ ರೂ.80.33 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

2023-24ನೇ ಸಾಲಿನಲ್ಲಿ ರೂ.100.00 ಲಕ್ಷಗಳನ್ನು ಮೀಸಲಿಟ್ಟಿದ್ದು, ಈ ಪೈಕಿ ರೂ.69.74 ಲಕ್ಷಗಳನ್ನು ಒದಗಿಸಿದ್ದು ಬಾಕಿ ಇರುವ ಮೊತ್ತವನ್ನುಪ್ರಸ್ತುತ.ಸರ್ಕಾರದ ಆದೇಶದಂತೆ ಯೋಜನೆಗಳನ್ನು K2 ಮೂಲಕ ಅನುಷ್ಠಾನಗೊಳಿಸಬೇಕಾಗಿರುವುದರಿಂದ K2 ಮೂಲಕ ಪಾವತಿಸಲು ಕ್ರಮವಹಿಸಲಾಗಿದೆ.

ಇ) ಸದರಿ ನಿಗಮಕ್ಕೆ ಬಿಡುಗಡೆಯಾದ ಹಣವೆಷ್ಟು ; ಈ ಮೊತ್ತವನ್ನು ಯಾವ ಯಾವ ಬ್ಯಾಂಕಿನಲ್ಲಿ ಇಡಲಾಗಿದೆ ; (ಹಣದ ಸಮೇತ ವಿವರ ಒದಗಿಸುವುದು)

ಈ ನಿಗಮಕ್ಕೆ ಸಂಬಂಧಿಸಿದಂತೆ, ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

**(ರೂ. ಲಕ್ಷಗಳಲ್ಲಿ)**

| ಕ್ರ. ಸಂ. | ವರ್ಷ | ಬಿಡುಗಡೆಯಾದ ಮೊತ್ತ |
|---|---|---|
| 1 | 2021-22 | 1075.00 |
| 2 | 2022-23 | 2500.00 |
| 3 | 2023-24 | 900.00 |

ಮೇಲ್ಕಂಡ ಮೊತ್ತದಲ್ಲಿ ಖಜಾನೆ ಪಿ.ಡಿ ಖಾತೆಯಲ್ಲಿ ರೂ.3566.50 ಲಕ್ಷಗಳು ಹಾಗೂ ಬ್ಯಾಂಕ್ ಆಫ್ ಬರೋಡ ಇಂದಿರಾ ನಗರ ಶಾಖೆಯಲ್ಲಿ. ರೂ.86.28 ಲಕ್ಷಗಳ ಸಾಲ ಮರುಪಾವತಿ ಮತ್ತು ಅರ್ಜಿತವಾದ ಬಡ್ಡಿ ಮೊತ್ತ ಹಾಗೂ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ವಿಧಾನಸೌಧ ಶಾಖೆಯಲ್ಲಿ ರೂ.2.56 ಲಕ್ಷಗಳ ಅರ್ಜಿತವಾದ ಬಡ್ಡಿ ಮೊತ್ತ ಇರುತ್ತದೆ.

ಈ) ಸಮಾಜ ಕಲ್ಯಾಣ ಇಲಾಖೆ ಅಡಿ ಬರುವ ಯಾವ ಯಾವ ನಿಗಮದಲ್ಲಿ ಎಷ್ಟೆಷ್ಟು ಹಣದ ದುರ್ಬಳಕೆಯಾಗಿದೆ ? (ವಿವರವಾದ ಮಾಹಿತಿ ಒದಗಿಸುವುದು)

ಸಮಾಜ ಕಲ್ಯಾಣ ಇಲಾಖೆಯು ಈ ಕೆಳಕಂಡ ನಿಗಮಗಳಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ ವರದಿ ನೀಡಿರುತ್ತದೆ.

**ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ**

1. **<u>ತುಮಕೂರು ಜಿಲ್ಲೆ ಹಣ ದುರುಪಯೋಗ ಪ್ರಕರಣ:</u>**

ಶ್ರೀ ಜಯಣ್ಣ ಹೆಚ್. ಮೂಲತ: ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಪ್ರತಿನಿಯೋಜನೆ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರು ತುಮಕೂರು ಜಿಲ್ಲೆಯ ಹೆಚ್ಚುವರಿ ಪ್ರಭಾರ ಜಿಲ್ಲಾ ವ್ಯವಸ್ಥಾಪಕರಾಗಿ ಕಾರ್ಯನಿರ್ವಹಿಸಿದ ಅವಧಿಯಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ವಿವಿಧ ಯೋಜನೆಗಳಾದ ಉದ್ಯಮ ಶೀಲತಾ ಯೋಜನೆ, ನೇರ ಸಾಲ ಯೋಜನೆ, ಮೈಕ್ರೋಕ್ರೆಡಿಟ್ ಪ್ರೇರಣಾ ಯೋಜನೆ

ಸಮೃದ್ಧಿ ಯೋಜನೆ, ಐರಾವತ ಯೋಜನೆ ಅನುಷ್ಠಾನಗೊಳಿಸಿರುವ ವಿಷಯಕ್ಕೆ ಸಂಬಂಧಿಸಿದ **ರೂ.4,20,23,872/-**ಗಳನ್ನು ದುರುಪಯೋಗ ಪಡಿಸಿಕೊಂಡಿರುವುದು ತನಿಖೆಯಲ್ಲಿ ದೃಡಪಟ್ಟಿರುತ್ತದೆ.

ಸದರಿ ಆರೋಪಗಳಿಗೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:115/2021 ಅನ್ನು ತುಮಕೂರು ಸಿ ಇ ಎನ್ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ ಹಾಗೂ CC No:4406/2022ನ್ನು ಮಾನ್ಯ ಜಿಲ್ಲಾ ನ್ಯಾಯಾಲಯ ತುಮಕೂರು ಇಲ್ಲಿ ದಾಖಲಿಸಿರುತ್ತಾರೆ ಮತ್ತು ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಈ ಸಂಬಂಧ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಲಾಗಿ, ಇಲಾಖಾ ವಿಚಾರಣೆಯನ್ನು ಮುಕ್ತಾಯಗೊಳಿಸಿ ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ವಿಚಾರಣೆಯನ್ನು ಅಂಗೀಕರಿಸಿ ಸರ್ಕಾರವು ಸದರಿ ಅಧಿಕಾರಿಯವರಿಗೆ 2ನೇ ಕಾರಣ ಕೇಳುವ ನೋಟೀಸ್ ಜಾರಿಗೊಳಿಸಿದ್ದು, ಶ್ರೀ ಜಯಣ್ಣ ಇವರು ಸಲ್ಲಿಸಿರುವ ಸಮಜಾಯಿಷಿಯನ್ನು ಪರಿಶೀಲಿಸಿ ವರದಿ ಸಲ್ಲಿಸುವಂತೆ ದಿನಾಂಕ:19.06.2024ರಂದು ವ್ಯವಸ್ಥಾಪಕ ನಿರ್ದೇಶಕರು ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಇವರಿಗೆ ತಿಳಿಸಿದೆ.

**2. ಕಲ್ಕೆರೆ ಕೆನರಾ ಬ್ಯಾಂಕ್ ಹಣ ದುರುಪಯೋಗ ಪ್ರಕರಣ:**

ಡಾ. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಬೆಂಗಳೂರುನಗರಜಿಲ್ಲೆಯಲ್ಲಿ ದಿನಾಂಕ:27.06.2017-30.06.2018ರವರೆಗೆ ಅಂದಿನ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಶ್ರೀಜಿ. ಜಿ.ಪದ್ಮನಾಭ ಹಾಗೂ ಶ್ರೀ ಅರುಣ್ ಕುಮಾರ್ ಇವರು ಸ್ವಯಂ ಉದ್ಯೋಗ ಹಾಗೂ ಐ.ಎಸ್.ಬಿ ಯೋಜನೆಗಳಡಿ ನಿಗಮದ ಮತ್ತು ಬ್ಯಾಂಕಿನ ನಿಯಮ / ಯೋಜನೆಗಳ ಮಾರ್ಗ ಸೂಚಿಗಳನ್ನು ಅನುಸರಿಸದೇ, ಅರ್ಜಿ ದಾರರ ಅರ್ಜಿಗಳನ್ನು ಸರಿಯಾಗಿ ಪರಿಶೀಲನೆ ಮಾಡದೇ, ಕೆನರಾ ಬ್ಯಾಂಕ್ ಕಲ್ಕೆರೆ ಶಾಖೆಯ ಒಂದೇ ಬ್ಯಾಂಕಿಗೆ ಎಲ್ಲಾ ಅರ್ಜಿಗಳನ್ನು ಸಾಲ ಮಂಜೂರಾತಿಗಾಗಿ ಕಳುಹಿಸಿ ಬ್ಯಾಂಕಿನಿಂದ ಕ್ಲೇಂ ಬಂದ ನಂತರ ಒಂದೇ ಬ್ಯಾಂಕಿಗೆ **ರೂ.4,94,57,000/-** ಸಹಾಯ ಧನ ಬಿಡುಗಡೆ ಮಾಡಿ, ಏಕ ಕಾಲಕ್ಕೆ ಒಂದಕ್ಕಿಂತ ಹೆಚ್ಚಿನ ಅರ್ಜಿದಾರರಿಗೆ ಆದೇಶವನ್ನು ಹೊರಡಿಸಿ ಸಹಾಯಧನವನ್ನು ಕೆನರಾ ಬ್ಯಾಂಕ್ ಕಲ್ಕೆರೆ ಶಾಖೆಗೆ ಬಿಡುಗಡೆ ಮಾಡಿದ ಸಹಾಯಧನವನ್ನು ಸದರಿ ಕೆನರಾ ಬ್ಯಾಂಕ್‌ನಿಂದ ಫಲಾನುಭವಿಗಳ ಖಾತೆಗೆ ಜಮೆಯಾಗದೇ ಬ್ಯಾಂಕ್ 10 ಜನಮಧ್ಯವರ್ತಿಗಳ ಖಾತೆಗೆ ಜಮೆ ಮಾಡುವಲ್ಲಿಇವರು ಪಾತ್ರ ವಹಿಸಿರುತ್ತಾರೆ ಎಂಬ ಆರೋಪ.

ಸದರಿ ಆರೋಪಗಳಿಗೆ ಸಂಬಂಧಿಸಿದಂತೆ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:0191/2019 ಅನ್ನು ಮಾಗಡಿ ರಸ್ತೆ ಪೊಲೀಸ್ ಠಾಣೆಯಲ್ಲಿ ದಾಖಲಿಸಲಾಗಿದೆ ಹಾಗೂ CC No:7075/2021ನ್ನು ಮಾನ್ಯ ನ್ಯಾಯಾಲಯ IV Addl. Chief Metropolitan Magistrate, Bangalore ಇಲ್ಲಿ ದಾಖಲಿಸಿರುತ್ತಾರೆ ಮತ್ತು ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುತ್ತದೆ. ಮುಂದುವರೆದು, ಸದರಿ ಪ್ರಕರಣವು ಕೆನರಾ ಬ್ಯಾಂಕ್ ಕಲ್ಕೆರೆ ಬ್ಯಾಂಕಿನ ಅಧಿಕಾರಿಗಳು ಮಾಡಿರುವುದರಿಂದ **ರೂ.4,94,57,000/-ಗಳನ್ನು** ಕೆನರಾ ಬ್ಯಾಂಕ್ ಇವರು ಕೆನರಾ ಬ್ಯಾಂಕ್ ಪತ್ರ ಸಂಖ್ಯೆ: CB: GBB : GEN:21:2021:HR Date: 24.03.2021ರಲ್ಲಿ ನಿಗಮದ ಖಾತೆಗೆ ಹಿಂದಿರುಗಿಸಿರುತ್ತಾರೆ ಹಾಗೂ ನಿಗಮದ ಅಧಿಕಾರಿ / ಸಿಬ್ಬಂದಿಗಳವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ನೇಮಿಸಿದ್ದು, ಇಲಾಖಾ ವಿಚಾರಣೆಯಲ್ಲಿ ಆರೋಪವು ಸಾಬೀತಾಗದೇ ಇರುವುದರಿಂದ ಅಧಿಕಾರಿ / ಸಿಬ್ಬಂದಿಗಳನ್ನು ಆರೋಪ ಮುಕ್ತಗೊಳಿಸಿ ಆದೇಶಿಸಲಾಗಿದೆ.

| | | |
|---|---|---|
| | | **ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ**<br>ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದಲ್ಲಿ 2021-22ನೇ ಸಾಲಿನಲ್ಲಿ ಹಿಂದಿನ ಅಧಿಕಾರಿಗಳ ಅವಧಿಯಲ್ಲಿ ನಡೆದಿದೆ ಇನ್ನಲಾದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ನಿಗಮದ ವಿಶೇಷ ಲೆಕ್ಕ ಪರಿಶೋಧನೆ ವರದಿಯಲ್ಲಿ ಒಟ್ಟಾರೆ ರೂ.88.74 ಕೋಟಿ ಅವ್ಯವಹಾರ ಆಗಿರುತ್ತದೆಂದು ತಿಳಿಸಿರುತ್ತಾರೆ.<br>ಅವ್ಯವಹಾರದಲ್ಲಿ ಭಾಗಿಯಾಗಿದ್ದರೆನ್ನಲಾದ ಅಪಾದಿತರ ವಿರುದ್ಧ ಮಾನ್ಯ ಸರ್ಕಾರವು ಆರೋಪಿತರುಗಳನ್ನು ಸೇವೆಯಹಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಿದ್ದು, ತದನಂತರ ಸದರಿ ಅಧಿಕಾರಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ. ಮುಂದುವರೆದು, ಸರ್ಕಾರದ ಆದೇಶದ ಸಂಖ್ಯೆ ಹೆಚ್ ಡಿ 2 ಸಿಒಡಿ 2023, ದಿನಾಂಕ: 02.12.2023 ರಲ್ಲಿ ಸದರಿ ನಿಗಮವು ಅನುಷ್ಠಾಗೊಳಿಸಿರುವ ಯೋಜನೆಗಳಲ್ಲಿ ಹಣ ದುರುಪಯೋಗವಾಗಿರುವ ಕುರಿತು ಸಮಗ್ರ ತನಿಖೆಗಾಗಿ ವಹಿಸಲಾಗಿದೆ.<br>**ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ**<br>ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಲ್ಲಿ ಯಾವುದೇ ಹಣ ದುರ್ಬಳಕೆಯಾಗಿರುವುದಿಲ್ಲ. ಹಣ ದುರುಪಯೊಗದ ಬಗ್ಗೆ ಪತ್ರಿಕೆಯಲ್ಲಿ ಬಂದವರದಿ ಮೇರೆಗೆ ತನಿಖೆ ಮಾಡಲು ಸಕಇ 415 ಎಸ್‌ಡಿಸಿ 2023, ದಿನಾಂಕ:10.07.2024 ರಲ್ಲಿ ಆದೇಶಿಸಿದೆ. |

**ಸಂಖ್ಯೆ:ಹಿಂವಕ 543 ಬಿಎಂಎಸ್ 2024**

**(ಶಿವರಾಜ. ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು.

## ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ

### ಅನುಬಂಧ-1

20. 23ನೇ ಸಾಲಿನಿಂದ 2023-24ನೇ ಸಾಲಿನವರೆಗೆ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಜಿಲ್ಲಾವಾರು ಸ್ವೀಕರಿಸಿದ ಅರ್ಜಿಗಳ ವಿವರ

| ಕ್ರ ಸಂ | ಜಿಲ್ಲೆಯ ಹೆಸರು | ಅರಿವು ಶೈಕ್ಷಣಿಕ ಸಾಲ ಯೋಜನೆ | | |
|---|---|---|---|---|
| | | 2021-22 | 2022-23 | 2023-24 |
| | | ಸಂಖ್ಯೆ | ಸಂಖ್ಯೆ | ಸಂಖ್ಯೆ |
| 1 | ಬೆಂಗಳೂರು (ದಕ್ಷಿಣ) | 2021-22ನೇ ಸಾಲಿನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಬೇಕಾಗಿದ್ದು, ಸುವಿಧಾ/ಸೇವಾ ಸಿಂಧೂ ತಂತ್ರಾಂಶ ಸಿದ್ಧವಾಗಿಲ್ಲದ ಕಾರಣ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. | 5 | 1 |
| 2 | ಬೆಂಗಳೂರು (ಉತ್ತರ) | | 1 | 2 |
| 3 | ಬೆಂಗಳೂರು ಗ್ರಾಮಾಂತರ | | 1 | 0 |
| 4 | ಶಿವಮೊಗ್ಗ | | 14 | 2 |
| 5 | ಚಿತ್ರದುರ್ಗ | | 2 | 1 |
| 6 | ತುಮಕೂರು | | 1 | 0 |
| 7 | ಕೋಲಾರ | | 0 | 0 |
| 8 | ಚಿಕ್ಕಬಳ್ಳಾಪುರ | | 0 | 3 |
| 9 | ರಾಮನಗರ | | 0 | 1 |
| 10 | ದಾವಣಗೆರೆ | | 1 | 3 |
| 11 | ಮೈಸೂರು | | 2 | 1 |
| 12 | ಮಂಡ್ಯ | | 9 | 5 |
| 13 | ಹಾಸನ | | 0 | 1 |
| 14 | ಚಿಕ್ಕಮಗಳೂರು | | 1 | 0 |
| 15 | ಕೊಡಗು | | 0 | 0 |
| 16 | ಚಾಮರಾಜನಗರ | | 1 | 0 |
| 17 | ಉಡುಪಿ | | 70 | 37 |
| 18 | ದಕ್ಷಿಣ ಕನ್ನಡ | | 6 | 1 |
| 19 | ಬೆಳಗಾವಿ | | 1 | 4 |
| 20 | ವಿಜಯಪುರ | | 0 | 0 |
| 21 | ಬಾಗಲಕೋಟೆ | | 6 | 1 |
| 22 | ಧಾರವಾಡ | | 3 | 1 |
| 23 | ಗದಗ | | 2 | 0 |
| 24 | ಹಾವೇರಿ | | 3 | 4 |
| 25 | ಉತ್ತರ ಕನ್ನಡ | | 1 | 12 |
| 26 | ಕಲಬುರಗಿ | | 6 | 6 |
| 27 | ಬಳ್ಳಾರಿ | | 3 | 5 |
| 28 | ವಿಜಯನಗರ | | 2 | 3 |
| 29 | ಬೀದರ್ | | 0 | 0 |
| 30 | ರಾಯಚೂರು | | 5 | 3 |
| 31 | ಕೊಪ್ಪಳ | | 3 | 2 |
| 32 | ಯಾದಗಿರಿ | | 5 | 5 |
| ಒಟ್ಟು | | | **154** | **104** |

ವ್ಯವಸ್ಥಾಪಕ ನಿರ್ದೇಶಕರು
ಎನ್.ಎ.ಸಿ.ಡಿ.ಸಿ, ಬೆಂಗಳೂರು